ಮೈಸೂರು ನಗರದ ಮೆಟ್ರೋಪೋಲ್ ಹೋಟೆಲ್ ಕಟ್ಟಡವನ್ನು ಖಾಸಗಿಯವರಿಗೆ ಗುತ್ತಿಗೆಗೆ ನೀಡಿರುವುದು.

2278(3234) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :-- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರದ ಮೆಟ್ರೋಪೋಲ್ ಹೋಟೆಲ್ (ಆಗಿನ) ಕಟ್ಟಡವನ್ನು ನೀಡುವಂತೆ ಯಾವ ಯಾವ ಸಂಸ್ಥೆಯವರು ಸರ್ಕಾರವನ್ನು (ಖಾಸಗಿ ಸರ್ಕಾರಿ) ಕೋರಿರುವರು?

ಆ) ಈ ಕಟ್ಟಡ ಎಷ್ಟು ವರ್ಷಗಳಿಂದ ತೆರವಾಗಿದೆ? ತೆರವಾದಂದಿನಿಂದ ಇಲ್ಲಿಯವರೆಗೆ ಈ ಕಟ್ಟಡಕ್ಕೆ ಸಂಬಂಧಿಸಿದಂತೆ ಆದಂಥಹ ಪ್ರಕ್ರಿಯೆಗಳ ಬಗ್ಗೆ ವಿವರ ನೀಡುವುದು.

ಇ) ಈ ಕಟ್ಟಡವನ್ನು ಖಾಲಿ ಬಿಡದೆ ಸದುಪಯೋಗಪಡಿಸಿಕೊಳ್ಳುವ ವಿಚಾರದಲ್ಲಿ ಸರ್ಕಾರದ ಇತ್ತೀಚಿನ ನಿಲುವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಮೈಸೂರು ನಗರದ ಮೆಟ್ರೋ ಪೋಲ್ ಕಟ್ಟಡವನ್ನು ಮೆ: ರಿಟ್ಸ್ ಹೋಟೆಲ್ (ಮೈಸೂರು) ಲಿಮಿಟೆಡ್‌ರವರಿಂದ ದಿನಾಂಕ: 30-6-97ರಂದು ಲೋಕೋಪಯೋಗಿ ಇಲಾಖೆಯು ವಶಪಡಿಸಿಕೊಂಡ ನಂತರ ಸದರಿ ಕಟ್ಟಡವನ್ನು ನೀಡುವಂತೆ ಮೈಸೂರು ಮಹಾರಾಣಿ ಕಾಲೇಜಿನವರು ಹಾಗೂ ಗ್ರಂಥಾಲಯ ಇಲಾಖೆಯವರು ಕೋರಿದ್ದರು.

ಆ) ದಿನಾಂಕ 30-6-97 ರಿಂದ ದಿನಾಂಕ 6-10-20 ರವರೆಗೆ 3 ವರ್ಷ 3 ತಿಂಗಳು ಲೋಕೋಪಯೋಗಿ ಇಲಾಖೆ ವಶದಲ್ಲಿದ್ದಾಗ ತೆರವಾಗಿತ್ತು. ದಿನಾಂಕ: 30-6-97 ರಂದು ಮೆಟ್ರೋಪೋಲ್ ಹೋಟೆಲ್‌ನ್ನು ಮೆ: ರಿಟ್ಸ್ ಹೋಟೆಲ್ಸ್ (ಮೈಸೂರು) ಲಿಮಿಟೆಡ್ ರವರಿಂದ ತೆಗೆದುಕೊಂಡ ನಂತರ ಸದರಿ ಹೋಟೆಲನ್ನು ಗುತ್ತಿಗೆ ಆಧಾರದಲ್ಲಿ ನೀಡಲು 3 ಬಾರಿ ಟೆಂಡರ್ ಕರೆಯಲಾಯಿತು. ಟೆಂಡರ್‌ನಲ್ಲಿ 6 ವಿವಿಧ ಸಂಸ್ಥೆಗಳು ಭಾಗಿಯಾಗಿದ್ದು, ಯಾರೊಬ್ಬರೂ ಟೆಂಡರ್ ಪ್ರಕಟಣೆಯ ನಿಯಮ ನಿಬಂಧನೆಗಳನ್ನು ಪೂರ್ಣಗೊಳಿಸಿದ ಕಾರಣ ರದ್ದುಗೊಳಿಸಲಾಯಿತು. ಸರ್ಕಾರವು ದಿ: 5-10-99ರಲ್ಲಿ ಆದೇಶ ಮಾಡಿ ಸದರಿ ಹೋಟೆಲ್‌ನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಖಾಸಗಿ ಹೋಟೆಲ್ ಉದ್ಯಮಿಯವರ ಸಹಭಾಗಿತ್ವದಿಂದ ನಡೆಸಲು ವರ್ಗಾಯಿಸಲಾಯಿತು. ನಂತರ ಈ ಆದೇಶವನ್ನು ಸಮಗ್ರ ಪರಿಶೀಲನೆಗಾಗಿ ಸರ್ಕಾರವು ದಿನಾಂಕ:15-2-2000 ರಂದು ಹಿಂದಕ್ಕೆ ಪಡೆಯಲಾಯಿತು. ನಂತರ ದಿ: 14-8-2000ರಂದು ಸರ್ಕಾರದ ಸೂಚನೆಯಂತೆ ಸದರಿ ಹೋಟೆಲನ್ನು ಗುತ್ತಿಗೆ ಆಧಾರದಲ್ಲಿ ಹೆಚ್ಚಿನ ಬಿಡ್‌ದಾರರಿಗೆ ವಹಿಸುವಲ್ಲಿ ಟೆಂಡರ್ ಕರೆಯಲು ದಿನಾಂಕ: 25-8-2000ರಂದು ಪ್ರಕಟಣೆ ಹೊರಡಿಸಲಾಯಿತು.

ಇದಾದ ನಂತರ ದಿನಾಂಕ: 12-9-2000 ರಲ್ಲಿ ಸರ್ಕಾರವು ಸಂಬಂಧಪಟ್ಟವರಿಗೆ ಆದೇಶ ನೀಡಿ ಸದರಿ ಹೋಟೆಲ್ ಮೈಸೂರಿನ ಕೇಂದ್ರ ಸ್ಥಾನದಲ್ಲಿದ್ದು ಸರ್ಕಾರದ ಬೆಲೆ ಬಾಳುವ ಸ್ವತ್ತಾಗಿರುವುದರಿಂದ ಇದರ ರಕ್ಷಣೆಗಾಗಿ ಸಿಬ್ಬಂದಿಯನ್ನು ನೇಮಿಸಿರುವುದರಿಂದ ಉಂಟಾಗುವ ನಷ್ಟವನ್ನು ತಡೆಗಟ್ಟುವ ಉದ್ದೇಶದಿಂದ ಸದರಿ ಹೋಟೆಲನ್ನು ಕೂಡಲೇ ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಲು ನಿರ್ಧರಿಸಲಾಗಿರುವುದರಿಂದ ದಿನಾಂಕ: 25-8-2000ರಂದು ಕರೆಯಲಾಗಿದ್ದ ಟೆಂಡರ್ ಪ್ರಕಟಣೆಯನ್ನು ಹಿಂಪಡೆದು ಸರ್ಕಾರವು ಸದರಿ ಹೋಟೆಲನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆಗೆ ದಿ: 6-10-2000 ರಂದು ಹಸ್ತಾಂತರಿಸಿದೆ.

ಇ) ಮೆಟ್ರೋಪೋಲ್ ಹೋಟೆಲ್‌ನ ಕಟ್ಟಡವನ್ನು ಲಾಭದಾಯಕವಾಗಿ ಸದುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ಪ್ರವಾಸೋದ್ಯಮ ಇಲಾಖೆಗೆ ವಹಿಸಲಾಗಿದ್ದು ಸದರಿ ಕಟ್ಟಡವನ್ನು ಖಾಸಗಿಯವರಿಗೆ ಹೋಟೆಲ್ ನಡೆಸಲು ಗುತ್ತಿಗೆ ಆಧಾರದಲ್ಲಿ ನಡೆಸಲು ಪ್ರವಾಸೋದ್ಯಮ ಇಲಾಖೆಯು ಕ್ರಮ ತೆಗೆದುಕೊಂಡಿರುತ್ತದೆ.

ತುಮಕೂರು-ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕುಂಠಿತಗೊಂಡಿರುವುದು.

2273(2735) ಶ್ರೀ ಎಸ್. ಶಿವಣ್ಣ (ತುಮಕೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರು- ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಹಣದ ಕೊರತೆಯಿಂದ ಕುಂಠಿತಗೊಂಡಿರುವುದು ನಿಜವೇ?

ಆ) ಈ ರಾಷ್ಟ್ರೀಯ ಹೆದ್ದಾರಿಯನ್ನು ಸರ್ಕಾರ ಘೋಷಿಸಿದ್ದು ಯಾವಾಗ? ಈ ರಸ್ತೆಯ ಉದ್ದವೆಷ್ಟು? ಕಾಮಗಾರಿ ಮೊತ್ತವೆಷ್ಟು? ಈಗಾಗಲೇ ಕೆಲಸ ಎಷ್ಟು ಸಾಗಿದೆ? ಪೂರ್ಣಗೊಳಿಸಲು ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೇ?

ಇ) ಇದಕ್ಕೆ ಪೂರಕವಾಗಿ ರಸ್ತೆ ಪರಿವರ್ತನಾ ಕಾರ್ಯ ಆರಂಭವಾಗಿದೆಯೇ? ಎಷ್ಟು ಕಿಲೋಮೀಟರ್ ರಸ್ತೆ ಕೆಲಸ ಪೂರ್ಣಗೊಂಡಿರುತ್ತದೆ (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಇಲ್ಲ.

ಆ) ತುಮಕೂರು-ಹೊನ್ನಾವರ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ-206ಎಂಬುದಾಗಿ ದಿನಾಂಕ: 6-1-99 ರಲ್ಲಿ ಕೇಂದ್ರ ಸರ್ಕಾರ ಘೋಷಿಸಿರುತ್ತದೆ. ಈ ಹೆದ್ದಾರಿಯ ಒಟ್ಟು ಉದ್ದ 365 ಕಿ.ಮೀ. ಇರುತ್ತದೆ.

1) 1999-2000ನೇ ಸಾಲಿನಲ್ಲಿ ಈ ರಾಷ್ಟ್ರೀಯ ಹೆದ್ದಾರಿಯ ಆಯ್ದ 111 ಕಿ.ಮೀ.ಗಳ ವಾಹನ ಸಂಚಾರ ಪಥದ ಅಭಿವೃದ್ಧಿಗೆ ರೂ. 1040 ಲಕ್ಷಗಳ ಅಂದಾಜು ಮಂಜೂರಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ.